

## ಬ್ಯಾಡಗಿ

ಬ್ಯಾಡಗಿ ತಾಲ್ಲೂಕಿನ ಕದರಮಂಡಲಗಿಯಲ್ಲಿ ಕಾಂತೇಶನ ದೇವಸ್ಥಾನವಿದೆ. ಇದು ನಾಡಪ್ರಸಿದ್ದವಾದ ಅಸಂಖ್ಯಾತ ಭಕ್ತಾದಿಗಳನ್ನು ಹೊಂದಿರುವ ಪುಣ್ಯಕ್ಷೇತ್ರವಾಗಿದೆ. ಪ್ರತಿವರ್ಷ ಶ್ರಾವಣ ಮಾಸದ ನಾಲ್ಕು ಶನಿವಾರಗಳಂದು ಪಾಲಿಕೆ ಹೊರಡಿಸುವುದು, ಕಾರ್ತಿಕ ಮಾಸದಲ್ಲಿ ತೆಪ್ಪೋತ್ಸವ ಪುಷ್ಕರದಲ್ಲಿ ನಡೆಯುವುದು ಮತ್ತು ಭರತ ಹುಣ್ಣಿಮೆಯ ನಂತ್ರದ ಸೋಮವಾರ ಅಥವಾ ಶುಕ್ರವಾರಗಳಂದು ಸ್ವಾಮಿಯ ರಥೋತ್ಸವ ನಡೆಯುತ್ತದೆ. ಸುಮಾರು ನಲವತ್ತು ಅಡಿ ಎತ್ತರದ ತೇರನ್ನು ವಿವಿಧ ಬಣ್ಣದ ಬಟ್ಟೆಗಳಿಂದ ಅಲಂಕೃತ ಮಾಡಿರುತ್ತಾರೆ. ಈ ವರ್ಷ ವಿಶೇಷವೆಂಬಂತೆ ಭಾರತದ ತ್ರಿವರ್ಣ ಧ್ವಜದ ಕೇಸರಿ, ಬಿಳಿ ಮತ್ತು ಹಸಿರು ಬಣ್ಣದ ಬಟ್ಟೆಗಳನ್ನು ತೇರಿನ ಅಲಂಕಾರಕ್ಕೆ ಬಳಸಿ, ರಾಷ್ಟ್ರಭಕ್ತಿಯನ್ನು ನೆನಪಿಸುವಂತಿತ್ತು. ಮತ್ತೆ ಭಕ್ತರು ತಮ್ಮ ಹೊಲದಲ್ಲಿ ಬೆಳೆದ ಬಾಳೆಗೊನೆ, ಅಡಿಕೆ ಗೊನೆ, ಎಳೆನೀರಿನ ಗೊಂಚಲು, ವಿವಿಧ ಬಗೆಯ ದವಸ ಧಾನ್ಯಗಳ ಸಸಿಗಳನ್ನು ತೇರಿಗೆ ಕಟ್ಟಿ ತಮ್ಮ ಭಕ್ತಿಯನ್ನು ಸಮರ್ಪಿಸುತ್ತಾರೆ. ರಥೋತ್ಸವ ವೈಭವದಿಂದ ಸಹಸ್ರಾರು ಭಕ್ತಾದಿಗಳ 'ರಾಮ್ ರಾಮ್, ಗೋವಿಂದ' ಎಂಬ ಉದ್ಘೋಷದಲ್ಲಿ ವೈಭವದಿಂದ ನಡೆಯುತ್ತದೆ. ಅಧಿಕ ಮಾಸದ ಶ್ರಾವಣ ಶನಿವಾರ ಕದರಮಂಡಲಗಿ ಕಾಂತೇಶ, ಸಾತೇನಹಳ್ಳಿ ಶಾಂತೇಶ, ಶಿಕಾರಿಪುರದ ಭ್ರಾಂತೇಶನನ್ನು ನೋಡಿದರೆ ಒಳಿತಾಗುತ್ತದೆಂಬುದು ಭಕ್ತರ ನಂಬಿಕೆಯಾಗಿರುವುದನ್ನು ನಾವಿಲ್ಲಿ ನೆನಪಿಸಿಕೊಳ್ಳಬಹುದು.

—ಮಲ್ಲಪ್ಪ ಫ. ಕರೇಣ್ಣನವರ, ರಾಣೇಬೆನ್ನೂರು

## ಕೈಯಲ್ಲಿ ಅರಳಿದ ಜೂಲಾ



ಗೃಹ ಅಲಂಕಾರಕ್ಕಾಗಿ ಈ ಜೂಲಾವನ್ನು ಉಪಯೋಗಿಸುತ್ತಾರೆ. ಮಾರುಕಟ್ಟೆಯಲ್ಲಿ ನೀವು ಕೊಡುವ ದುಡ್ಡಿಗೆ ತಕ್ಕಂತೆ ಜೂಲಾ ಸಿಗುವುದು ಸರ್ವೇಸಾಮಾನ್ಯ. ಆದರೆ ಹುಬ್ಬಳ್ಳಿ ನಗರದ ನಿವಾಸಿ ದೇವಕ್ಕ ಹುಣಸಿಮರದ ಅವರು ಚೆಂದನೆಯ ಜೂಲಾವಂದನ್ನು ತಾವೇ ಹೆಣೆದು ಮನೆಯ ಅಲಂಕಾರ ಮಾಡಿದ್ದಾರೆ. ಬಿಳಿ ಬಣ್ಣದ ಉಲ್ಲನ್ ಹಾಗೂ ಬಂಗಾರ ವರ್ಣದ ಘಂಟೆ ಇದರ ಅಂದವನ್ನು ಹೆಚ್ಚಿಸಿದೆ. ಚೆಂದನೆಯ ಗಾಳಿ ಬೀಸಿದಾಗ ಘಂಟೆ ಬಾರಿಸುತ್ತದೆ. ಸರಳ ಮತ್ತು ಅತಿ ಕಡಿಮೆ ಖರ್ಚು, ಅವಧಿಯಲ್ಲಿ ಈ ಜೂಲಾ ಸಿದ್ಧವಾಗಿದೆ. ನೀವೂ ನಿಮಗೆ ಬೇಕಾದ ತರಹದ ಜೂಲಾಗಳನ್ನು ನಿರ್ಮಿಸಿಕೊಳ್ಳಿ

—ಗಾಯತ್ರಿ ಡಿ. ಡೊಳ್ಳಿನ, ಬೆಳಗಾವಿ

## ಗಂಟೆಗುಚ್ಛ

ಗಂಗಾವತಿ ತಾಲ್ಲೂಕಿನ ಕನಕಗಿರಿ–ಕಾರಟಗಿ ಮಾರ್ಗದಲ್ಲಿ ಬರುವ ನವಲಿ ಎಂಬ ಗ್ರಾಮದಲ್ಲಿರುವ ಭೋಗಾಪುರೇಶ ಎಂಬ ಐತಿಹಾಸಿಕ ದೇವಸ್ಥಾನದಲ್ಲಿ ಛಾವಣಿಗೆ ಹಾಕಿರುವ ಗಂಟೆಗುಚ್ಛವಿದು. ಭೋಗಾಪುರೇಶ ದೇವರ ಮೂರ್ತಿ ಭಗ್ನವಾಗಿದ್ದು, ಅದರ ನಡುವಿನ ಅಂತರ ವಿಸ್ತಾರವಾಗುತ್ತಿದೆ ಎಂಬುದು ವಿಶೇಷ ಹಾಗೂ ಭಗ್ನಗೊಂಡ ಮೂರ್ತಿ ಪೂಜೆಗೊಳ್ಳುತ್ತಿರುವುದು ಇಲ್ಲಿನ ಇನ್ನೊಂದು ವಿಶೇಷ.

—ಸೋಮು ಕುದರಿಹಾಳ, ಗಂಗಾವತಿ

